# ಈ ಸಮಯ 'ನಿಮಿಷಾ'ಮಯ



■ ಪ್ರವೀಣ ಕುಲಕರ್ಣಿ

ಕೇವಲ ಒಂದು ನಿಮಿಷದಷ್ಟು ವಿವೇಚನೆ ಕೈಕೊಟ್ಟರೂ ಅದರಿಂದ ಏನೆಲ್ಲ ದುರಂತವಾಗಬಹುದು ಎಂಬುದನ್ನು ನಿಮಿಷ ಪ್ರಿಯಾ ಅವರಿಗಿಂತಲೂ ಚೆನ್ನಾಗಿ ಮತ್ತೊಬ್ಬರು ವಿವರಿಸಲು ಸಾಧ್ಯವೇ ಇಲ್ಲ. ಭಾರತದ ಕೇರಳದಿಂದ ಒಂದಿಷ್ಟು ಕಾಸು ಮಾಡುವ ಆಸೆ ಹೊತ್ತು ದೂರದ ಯೆಮನ್‌ಗೆ ಹೋದ ಈ ನರ್ಸ್, ಎಂಟು ವರ್ಷಗಳಿಂದ ಅಲ್ಲಿನ ಸನಾ ಜೈಲಿನ ಕಂಬಿಯ ಹಿಂದೆ ನಿಂತು, ಕಣ್ಣೀರು ಸುರಿಸುತ್ತಾ ಗಲ್ಲಿಗೇರುವ ದಿನದ ಎಣಿಕೆ ಮಾಡಿದ್ದಾರೆ. ಆಸ್ಪತ್ರೆ ಆರಂಭಿಸಬೇಕು ಎನ್ನುವ ತಮ್ಮ ಆಸೆಯು ಹೀಗೆ ನೇಣುಗಂಬದ ಎದುರು ತಂದು ನಿಲ್ಲಿಸುತ್ತದೆ ಎಂದು ಅವರು ಕನಸು–ಮನಸಿನಲ್ಲೂ ಎಣಿಸಿರಲಿಲ್ಲ.

ಕೇರಳದ ಪಾಲಕ್ಕಾಡ್ ಜಿಲ್ಲೆಯವರಾದ ನಿಮಿಷ ಪ್ರಿಯಾ, ನರ್ಸಿಂಗ್ ತರಬೇತಿ ಪೂರ್ಣಗೊಳಿಸಿದ ಬಳಿಕ ಕೆಲಸ ಹುಡುಕಿಕೊಂಡು ಹೋಗಿದ್ದು ಯೆಮನ್‌ಗೆ. ಕೂಲಿ ಕಾರ್ಮಿಕರಾಗಿದ್ದ ತಂದೆ–ತಾಯಿಗೆ ಆರ್ಥಿಕ ನೆರವು ಒದಗಿಸುವುದಕ್ಕಾಗಿ ಅವರು ಆಸ್ಪತ್ರೆಗಳಲ್ಲಿ ಹಗಲು ಮತ್ತು ರಾತ್ರಿ ಎರಡೂ ಪಾಳಿಗಳಲ್ಲಿ ಕೆಲಸ ಮಾಡುತ್ತಿದ್ದರು. ಅವರು ಅಷ್ಟೊಂದು ಶ್ರಮಜೀವಿಯಾಗಿದ್ದರು ಎಂದು ಮಾಧ್ಯಮಗಳು ವರದಿ ಮಾಡಿವೆ.

ಯೆಮನ್‌ನಲ್ಲಿ ಪರಿಶ್ರಮದಿಂದ ದೊಡ್ಡದಾಗಿ ಬೆಳೆಯಬೇಕು ಮತ್ತು ಸ್ವಂತ ಆಸ್ಪತ್ರೆ ತೆರೆಯಬೇಕು ಎಂಬ ಕನಸು ಕಾಣುತ್ತಿದ್ದ ನಿಮಿಷ ಪ್ರಿಯಾ ಅವರಿಗೆ, ಅದೊಂದು ದಿನ ಅಲ್ಲಿನ ಪ್ರಜೆ ತಲಾಲ್ ಅಬ್ದೊ ಮೆಹದಿ ಅವರ ಪರಿಚಯವಾಯಿತು. ಆ ಪರಿಚಯವೇ ಅವರನ್ನು ಸಾವಿನ ಬಾಗಿಲವರೆಗೆ ಕರೆ ತಂದು ನಿಲ್ಲಿಸಿದ್ದು. ಯೆಮನ್ ದೇಶದಲ್ಲಿರುವ ಕಾನೂನಿನ ಪ್ರಕಾರ, ಆ ದೇಶದಲ್ಲಿ ಯಾರಾದರೂ ವಿದೇಶಿಯರು ವಾಣಿಜ್ಯ ಸ್ವರೂಪದ ಚಟುವಟಿಕೆ ನಡೆಸಬೇಕಾದರೆ ಅವರೊಂದಿಗೆ ಸ್ಥಳೀಯ ವ್ಯಕ್ತಿಯೊಬ್ಬರ ಪಾಲುದಾರಿಕೆ ಇರಲೇಬೇಕು. ಮೆಹದಿ ಅವರು ನಿಮಿಷ ಪ್ರಿಯಾ ಅವರೊಟ್ಟಿಗೆ ಸೇರಿ ಆಸ್ಪತ್ರೆ ತೆರೆಯಲು ಒಪ್ಪಿದ್ದರಿಂದ ಕಾನೂನು ಪ್ರಕ್ರಿಯೆಗಳೆಲ್ಲ ಸುಸೂತ್ರವಾಗಿ ನಡೆದು, 2015ರಲ್ಲಿ ಆಸ್ಪತ್ರೆಯನ್ನೂ ಆರಂಭಿಸಿದರು. ಎಲ್ಲವೂ ಅಂದುಕೊಂಡಂತೆ ನಡೆದು, ಇನ್ನೇನು ವರಮಾನ ಭಾರಿ ಪ್ರಮಾಣದಲ್ಲಿ ಹೆಚ್ಚಲಿದೆ ಎಂದು ನಿಮಿಷ ಪ್ರಿಯಾ ಲೆಕ್ಕ ಹಾಕಿದ್ದರು. ಆದರೆ, ವರಮಾನದ ಪ್ರಮಾಣ ಹೆಚ್ಚುವುದಕ್ಕಿಂತಲೂ ವೇಗವಾಗಿ ವ್ಯವಹಾರದ ಪಾಲುದಾರ ಮೆಹದಿಯೊಂದಿಗೆ ಭಿನ್ನಾಭಿಪ್ರಾಯಗಳು ಹೆಚ್ಚತೊಡಗಿದವು. 'ಪಾಸ್‌ಪೋರ್ಟ್‌ಅನ್ನು ವಶದಲ್ಲಿರಿಸಿಕೊಂಡಿದ್ದ ಮೆಹದಿ, ದೈಹಿಕವಾಗಿ ಹಿಂಸೆ ನೀಡತೊಡಗಿದರು. ನನ್ನಲ್ಲಿದ್ದ ಹಣವನ್ನೂ ಕಿತ್ತುಕೊಂಡರು. ಗುಂಡಿಕ್ಕಿ ಕೊಲ್ಲುವುದಾಗಿಯೂ ಬೆದರಿಸಿದರು' ಎಂದು ಆಕೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನೂ ದಾಖಲಿಸಿದರು.

ನಿಮಿಷ ಪ್ರಿಯಾ ಅವರ ದೂರು ಆಧರಿಸಿ ಪೊಲೀಸರು ಮೆಹದಿಯನ್ನು ಬಂಧಿಸಿದರು. ಕೆಲಕಾಲ ಶಿಕ್ಷೆ ಅನುಭವಿಸಿ ಹೊರಬಂದ ಮೆಹದಿ, ಇನ್ನಷ್ಟು ಜಿದ್ದಿನಿಂದ ಈ ಭಾರತೀಯ ನರ್ಸ್‌ಗೆ ಕಿರುಕುಳ ನೀಡತೊಡಗಿದರು. ಪಾಸ್‌ಪೋರ್ಟ್ ಬೇರೆ ಅವರ ವಶದಲ್ಲೇ ಇತ್ತು. ಭಾರತಕ್ಕೆ ಮರಳಬೇಕೆಂದರೂ ಸಾಧ್ಯವಾಗದ ಸ್ಥಿತಿಯಲ್ಲಿದ್ದ ನರ್ಸ್ ಹತಾಶರಾಗಿದ್ದರು. ಮೆಹದಿಗೆ ನಿದ್ದೆ ಬರುವ ಔಷಧಿ ನೀಡಿ, ಅವರ ಪ್ರಜ್ಞೆ ತಪ್ಪಿಸಿ, ಪಾಸ್‌ಪೋರ್ಟ್ ಪಡೆಯಬಹುದು ಎಂಬ ಪರಿಚಿತರೊಬ್ಬರ ಸಲಹೆಯಂತೆ ನಡೆಯಲು ನಿಮಿಷ ಪ್ರಿಯಾ ನಿರ್ಧರಿಸಿದರು.

ಭಾರತದ ಈ ನರ್ಸ್ ಮೆಹದಿಗೆ ನೀಡಿದ ಚುಚ್ಚುಮದ್ದಿನ ಡೋಸ್ ಹೆಚ್ಚಾಗಿದ್ದರಿಂದ ಅವರು ನಿದ್ರೆ ಮಂಪರಿನಿಂದ ಕಣ್ಣುಬ್ಬುವ ಬದಲು ಚಿರನಿದ್ರೆಗೆ ಜಾರಿಬಿಟ್ಟರು. ಯೆಮನ್ ಪೊಲೀಸರ ಪ್ರಕಾರ, ನಿಮಿಷ ಪ್ರಿಯಾ ಅವರು ಮೆಹದಿ ದೇಹವನ್ನು ತುಂಡರಿಸಿ, ನೀರಿನ ಟ್ಯಾಂಕ್‌ನಲ್ಲಿ ಎಸೆದಿದ್ದರು. ಆದರೆ, ಅಂತಹ ತಪ್ಪನ್ನು ನಾನು ಮಾಡಿಲ್ಲ ಎನ್ನುವುದು ಈ ನರ್ಸ್ ವಾದ. ಆರೋಪಪಟ್ಟಿ ಸಲ್ಲಿಕೆಯಾಗಿ, ಕೋರ್ಟ್‌ನಲ್ಲಿ ವಿಚಾರಣೆ ನಡೆದ ಬಳಿಕ ನಿಮಿಷ ಪ್ರಿಯಾ ಅವರಿಗೆ ಮರಣದಂಡನೆ ಶಿಕ್ಷೆ ನಿಗದಿಯಾಯಿತು. ನಿಮಿಷ ಪ್ರಿಯಾ ಅವರ ಕುಟುಂಬ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದರೂ ಶಿಕ್ಷೆಯ ಪ್ರಮಾಣವೇನೂ ಕಡಿಮೆ ಆಗಲಿಲ್ಲ. ಯೆಮನ್‌ನ ಉನ್ನತ ರಾಜಕೀಯ ಪರಿಷತ್‌ನ ಅಧ್ಯಕ್ಷ ಮೆಹದಿ ಅಲ್ ಮಶಾತ್ ಸಹ ಮರಣದಂಡನೆ ಶಿಕ್ಷೆಗೆ ಒಪ್ಪಿಗೆ ಮುದ್ರೆ ಒತ್ತಿದ್ದರಿಂದ, ಜುಲೈ 16ರಂದು ಅವರಿಗೆ ಶಿಕ್ಷೆ ವಿಧಿಸಲಾಗುತ್ತದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಮರಣದಂಡನೆ ಶಿಕ್ಷೆಯಿಂದ ಪಾರು ಮಾಡಲು ಸಮಾನ ಆಸಕ್ತರ 'ಸೇವ್ ನಿಮಿಷ ಪ್ರಿಯಾ' ಎಂಬ ಆನ್‌ಲೈನ್ ತಂಡವೊಂದು ಸಿದ್ಧವಾಗಿದ್ದು, ಕ್ರೌಡ್ ಫಂಡಿಂಗ್ ಮೂಲಕ ಹಣವನ್ನೂ ಸಂಗ್ರಹಿಸಿದೆ. ಭಾರತದ ನರ್ಸ್ ಎದುರು ಶಿಕ್ಷೆಯಿಂದ ಪಾರಾಗಲು ಉಳಿದಿರುವ ಏಕೈಕ ಹಾದಿಯೆಂದರೆ ಮೆಹದಿ ಕುಟುಂಬದಿಂದ ಕ್ಷಮಾದಾನ ಪಡೆಯುವುದು. ಮೆಹದಿ ಕುಟುಂಬಕ್ಕೆ ₹ 8.5 ಕೋಟಿಯಷ್ಟು 'ದಿಯಾ' (ಅಪರಾಧ ಮನ್ನಿಸಲು ಸಲ್ಲಿಸುವ ಪರಿಹಾರ) ನೀಡಲು ನಿಮಿಷ ಪ್ರಿಯಾ ಪರವಾಗಿ ಕೆಲಸ ಮಾಡುತ್ತಿರುವ ಆನ್‌ಲೈನ್ ತಂಡದ ಸದಸ್ಯರು ಮುಂದಾಗಿದ್ದಾರೆ. ಅವರ ಪರವಾಗಿ ಮಧ್ಯಸ್ಥಿಕೆದಾರರು ಮೆಹದಿ ಕುಟುಂಬವನ್ನು ಸಂಪರ್ಕಿಸಿದ್ದಾರೆ. ಭಾರತದ ವಿದೇಶಾಂಗ ಇಲಾಖೆಯೂ ಈ ತಂಡಕ್ಕೆ ಸಾಧ್ಯವಿರುವ ನೆರವು ನೀಡುತ್ತಿದೆ. ಕೋರ್ಟ್–ಕಚೇರಿ, ವಿದೇಶಾಂಗ ವ್ಯವಹಾರ, ರಾಯಭಾರ ಏನೆಂದರೆ ಏನೂ ಗೊತ್ತಿಲ್ಲದ, ಮನೆಗೆಲಸ ಮಾಡಿಕೊಂಡಿದ್ದ ನಿಮಿಷ ಪ್ರಿಯಾ ಅವರ ಅಮ್ಮ ಪ್ರೇಮಾ ಕುಮಾರಿ ಯೆಮನ್‌ಗೆ ಹೋಗಿ ಮಗಳ ಪ್ರಾಣ ಉಳಿಸುವ ಪ್ರಯತ್ನ ಮಾಡಿದ್ದಾರೆ. 'ಮೆಹದಿ ಅವರ ಕುಂಟುಂಬದವರು ನೀಡುವ ಕ್ಷಮಾದಾನಕ್ಕಾಗಿ ನಾವು ತುದಿಗಾಲ ಮೇಲೆ ಕಾದಿದ್ದೇವೆ. 'ದಿಯಾ' ಅಲ್ಲದೆ ಅವರಿಂದ ಇನ್ನೂ ಏನಾದರೂ ಬೇಡಿಕೆ ಬಂದರೆ ಈಡೇರಿಸುತ್ತೇವೆ' ಎಂದು 'ಸೇವ್ ನಿಮಿಷ ಪ್ರಿಯಾ' ತಂಡದ ಬಾಬು ಜಾನ್ ಹೇಳುತ್ತಾರೆ.

ಸ್ಯಾಮ್ಯುವೆಲ್ ಜೆರೋಮ್ ಎಂಬುವವರು ಮಧ್ಯಸ್ಥಿಕೆದಾರರಾಗಿ ಕೆಲಸ ಮಾಡಿದ್ದಾರೆ, ಮೆಹದಿ ಕುಟುಂಬದಿಂದ ಅವರು ಯಾವ ಸಂದೇಶ ಹೊತ್ತು ತಂದಿದ್ದಾರೆ ಎಂಬುದು ನಿಮಗೀಗ ತಿಳಿದಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65